ದಿನಾಂಕ 28.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಮುಂದುವರೆದ</u> <u>ಪಾಟೀ ಸವಾಲುಃ- ವಾದಿಗಳ ಪರ ವಕೀಲರಿಂದಃ-</u>**

ಮಂದಪ್ಪ ಮತ್ತು ಮಹೇಶ್ ರವರು ನಮ್ಮ ಕುಟುಂಬದವರಾದ್ದರಿಂದ ಕ್ರಯದ ಕರಾರುಪತ್ರವನ್ನು ನೋಂದಣಿ ಮಾಡಿಸಿರುವುದಿಲ್ಲ. ನಿಶಾನೆ ಡಿ -22 ರ ಸ್ವತ್ತು ಮಂದಪ್ಪ ಮತ್ತು ಮಹೇಶ್ ರವರಿಗೆ ಸೇರಿತ್ತು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೆ ನಂ. 2/8 ಮತ್ತು ಸರ್ವೆ ನಂ. 2/9 ರ ಸ್ವತ್ತುಗಳನ್ನು ನಾನು ಒಟ್ಟು ಕುಟುಂಬದಿಂದ ಬಂದ ಆದಾಯದಿಂದ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಗಳಿಗೆ ಭಾಗಾಂಶವನ್ನು ನೀಡಬಾರದೆಂಬ ಕಾರಣಕ್ಕಾಗಿ ನಿ.ಡಿ 22 ದಾಖಲೆಯನ್ನು ನಾನು ಮಂದಪ್ಪ ಮತ್ತು ಮಹೇಶ್ ರವರೊಂದಿಗೆ ಸೇರಿಕೊಂಡು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ 23 ರಿಂದ 27 ದಾಖಲೆಗಳನ್ನು ಸೃಷ್ಟಿ ಪಡಿಸಿ, ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.